# ಗುಲಬರ್ಗಾ ವಿದ್ಯುತ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ (08472) 256782
ಫ್ಯಾಕ್ಸ ಸಂಖ್ಯೆ:- (08472) 256842

ನಿಗಮ ಕಾರ್ಯಾಲಯ
ಜೆಸ್ಕಾಂ, ಕಲಬುರಗಿ

ಜೆಸ್ಕಾಂ/ಪ್ರ.ವ್ಯ/ಉಲೆನಿ (ಮಾ.ಸಂ.ಅ)/ಜಿ-11/1376/2019-20/ 845-859 ದಿನಾಂಕ: 13 MAY 2019

## ಅಧಿಕೃತ ಜ್ಞಾಪನ ಪತ್ರ

ವಿಷಯ: ಎಮ್.ಟಿ.ಟಿ.ಪಿ.-2 (Mandatory Technical Training Programme) ರ ಅಡಿಯಲ್ಲಿ 11ನೇ ತಂಡದಲ್ಲಿ ನಾನ್-ಟೆಕನಿಕಲ್ ಮಾಪಕ ಓದುಗ/ಮೇಲ್ವಿಚಾರಕ/ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹಾಗೂ ಹೊಸದಾಗಿ ನೇಮಕ ಹೊಂದಿದ ಕಿರಿಯ ಮಾಪಕ ಓದುಗ ಇವರುಗಳಿಗೆ ದಿನಾಂಕ: : 03.06.2019 ರಿಂದ 22.07.2019 ರ ವರೆಗೆ ಉದ್ದೇಶಿತ ತರಬೇತಿಗೆ ನಿಯೋಜಿಸುವ ಕುರಿತು.

** **** **

ದಿನಾಂಕ: 03.06.2019 ರಿಂದ 22.07.2019 ರ ವರೆಗೆ ಎಮ್.ಟಿ.ಟಿ.ಪಿ-2 ರ ಅಡಿಯಲ್ಲಿ ಪ್ರಾರಂಭವಾಗುವ ಬಡ್ತಿಪೂರ್ವ ತರಬೇತಿಗೆ, ನಾನ್-ಟೆಕನಿಕಲ್ ಮಾಪಕ ಓದುಗ, ಮೇಲ್ವಿಚಾರಕ, ಆಪರೇಟರ್, ಸಹಾಯಕ ಉಗ್ರಾಣ ಪಾಲಕರು ಹಾಗೂ ಹೊಸದಾಗಿ ನೇಮಕ ಹೊಂದಿದ ಕಿರಿಯ ಮಾಪಕ ಓದುಗರವರಿಗೆ ವೃತ್ತಿಪೂರ್ವ, ತರಬೇತಿ ಮತ್ತು ನಾನ್-ಟೆಕನಿಕಲ್ ನೌಕರರಿಗೆ 10ನೇ ತರಗತಿ ಉತ್ತೀರ್ಣ ಮಾಡಿರುವ ಆಯಾ ವೃತ್ತದಲ್ಲಿನ ಹಿರಿತನ ಪಟ್ಟಿಯಲ್ಲಿನ ಹಿರಿತನಕ್ಕೆ ಅನುಗುಣವಾಗಿ ಪ್ರತಿ ವೃತ್ತದಿಂದ ಕೇವಲ 10 ನೌಕರರನ್ನು ಮಾತ್ರ ನಿಯೋಜಿಸುವುದು. ಮತ್ತು ಈ ಸಂಬಂಧ ಕಾರ್ಯ ಮತ್ತು ಪಾಲನೆ ವೃತ್ತದರವರಗಳು ತಮ್ಮ ವ್ಯಾಪ್ತಿಯಲ್ಲಿನ ವಿಭಾಗಗಳಿಂದ ಮಾಹಿತಿ ಪಡೆದು ಸೂಕ್ತ ಅಧಿಕೃತ ಜ್ಞಾಪನ ಪತ್ರದೊಂದಿಗೆ ನೌಕರರಿಗೆ ತರಬೇತಿಗೆ ನಿಯೋಜಿಸಿ ಆದೇಶ ಹೊರಡಿಸುವುದು.

ಪ್ರತಿ ವೃತ್ತದಿಂದ ಕೇವಲ 10 ಜನ ನೌಕರರನ್ನು ಮತ್ತು ತರಬೇತಿಗೆ ನಿಯೋಜಿಸುವುದು ಹಾಗೂ ಇದಕ್ಕೆ ಮೀರಿದ ನೌಕರರನ್ನು ಯಾವುದೇ ಕಾರಣಕ್ಕೂ ತರಬೇತಿಗೆ ಪರಿಗಣಿಸಲಾಗುವುದಿಲ್ಲ.

ಹೊಸದಾಗಿ ನೇಮಕ ಹೊಂದಿ ಈ ಹಿಂದೆ ತರಬೇತಿ ಪಡೆಯದೆ ಇರುವ ಕಿರಿಯ ಮಾಪಕ ಓದುಗ (ವೃತ್ತಿಪೂರ್ವ ತರಬೇತಿ).

ಈ ಹಿಂದೆ ಎಮ್.ಟಿ.ಟಿ.ಪಿ-2 ರ ಅಡಿಯಲ್ಲಿ ತರಬೇತಿ ಹೊಂದಿ ಉತ್ತೀರ್ಣ/ಅನುತ್ತೀರ್ಣ/ಆದ ಅಭ್ಯರ್ಥಿಗಳನ್ನು ಮತ್ತೆ ನಿಯೋಜಿಸಬಾರದು.

R&P ನಿಯಮಗಳ ಅಡಿಯಲ್ಲಿ ಬರುವ ಮತ್ತು ಈ ಹಿಂದೆ ತರಬೇತಿ ಪಡೆಯದೆ ಇರುವ ವೃತ್ತ ಜೇಷ್ಠತಾಪಟ್ಟಿ ಪ್ರಕಾರ, ಇರುವ ನಾನ್-ಟೆಕನಿಕಲ್ ಮಾಪಕ ಓದುಗ/ಮೇಲ್ವಿಚಾರಕ/ಆಪರೇಟರ್/ಸಹಾಯಕ ಉಗ್ರಾಣ ಪಾಲಕರು (ಶೇಕಡಾ 17.5 ಕೋಟಾದಲ್ಲಿ ಬಡ್ತಿಪೂರ್ವ ತರಬೇತಿ).

ಸಂಬಂಧ ಪಟ್ಟ ನಿಯಂತ್ರಣಾಧಿಕಾರಿಗಳು ಮುಂಗಡವಾಗಿಯೇ ಪರ್ಯಾಯ ವ್ಯವಸ್ಥೆ ಮಾಡಿಕೊಂಡು, ನಿಯೋಜಿತ ನೌಕರರನ್ನು ಬಿಡುಗಡೆ ಮಾಡಿ ದಿನಾಂಕ: 03.06.2019 ರಂದು ಮುಂಜಾನೆ ಸರಿಯಾಗಿ 9.00 ಗಂಟೆಗೆ ಗು.ವಿ.ಸ.ಕಂ.ನಿ., ತರಬೇತಿ ಕೇಂದ್ರ ಹಳೆಯ R.T.O. Office ಹಿಂದುಗಡೆ, ಸೇಡಂ ರಸ್ತೆ ಕಲಬುರಗಿನಲ್ಲಿ ಹಾಜರಾಗುವಂತೆ ಸೂಚಿಸುವುದು.

ನಿಯೋಜಿತ ನೌಕರರು ನಿಗಮ/ಕಂಪನಿಗಳ ಸೇವಾ ನಿಬಂಧನೆ ಅನುಸಾರ ಪ್ರಯಾಣ ಭತ್ಯೆ, ದಿನಭತ್ಯೆಗೆ ಅರ್ಹರಾಗಿರುತ್ತಾರೆ. ಮಧ್ಯಾಹ್ನ ಊಟದ ಹೊರತಾಗಿ ಇತರೇ ವ್ಯವಸ್ಥೆಯನ್ನು ಸ್ವತ: ನೌಕರರು ಮಾಡಿಕೊಳ್ಳತಕ್ಕದು. ತರಬೇತಿಗೆ ತಗಲುವ ಪ್ರಯಾಣಭತ್ಯೆ, ದಿನಭತ್ಯೆ ಇತ್ಯಾದಿ ಖರ್ಚುಗಳ ಬಾಬತ್ತನ್ನು ಲೆಕ್ಕಶೀರ್ಷಿಕೆ 75.761, 75.762 ಗೆ ಲೆಕ್ಕೀಕರಿಸುವುದು.

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ದಿನಾಂಕ: 03.06.2019 ರಂದು ಬೆಳಿಗ್ಗೆ 09.00 ಘಂಟೆಗೆ ಗುವಿಸಕಂನಿ, ತರಬೇತಿ ಕೇಂದ್ರ ಹಳೆಯ ಆರ್.ಟಿ.ಓ. ಆಫೀಸ್ ಹಿಂದುಗಡೆ, ಸೇಡಂ ರೋಡ್, ಕಲಬುರಗಿ ಇಲ್ಲಿ ಹಾಜರಾಗಿ ತರಬೇತಿಗೆ ನೊಂದಾಯಿಸಿಕೊಳ್ಳಲು ಅನುಕೂಲವಾಗುಂತೆ ಅವರನ್ನು ಸಕಾಲದಲ್ಲಿ ಕೆಲಸದಿಂದ ಕಾರ್ಯವಿಮುಕ್ತ (ರಿಲೀವ್) ಗೊಳಿಸುವುದು. ಜಮೆಯಲ್ಲಿರುವ ಸಾಂದರ್ಭಿಕ ರಜೆಯ ವಿವರಗಳನ್ನು ಸಹ ನಮೂದಿಸುವುದು.

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ಮೂರು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳಲ್ಲಿ ಒಂದನ್ನು ಕಾರ್ಯವಿಮುಕ್ತ ಪತ್ರದ ಬಲಭಾಗದಲ್ಲಿ ಅಂಟಿಸಿ ಕಛೇರಿ ಮುಖ್ಯಸ್ಥರ ಸಹಿ ಮತ್ತು ಮೊಹರುಗಳೊಂದಿಗೆ ಈ ಕೇಂದ್ರದಲ್ಲಿ ನೊಂದಾಯಿಸಿಕೊಳ್ಳವಾಗ ಹಾಜರು ಪಡಿಸಬೇಕು ಇನ್ನೆರಡು ಭಾವಚಿತ್ರಗಳನ್ನು ನೊಂದಣಿ ಸಮಯದಲ್ಲಿ ಹಾಜರು ಪಡಿಸುವುದು.

ನಿಯೋಜಿತ ನೌಕರರಿಗೆ ತರಬೇತಿ ಅವಧಿಯಲ್ಲಿ ಪೂರ್ವ ನಿಗದಿತ ಕಾರ್ಯಕ್ರಮ ಅಥವಾ ವೈಯುಕ್ತಿಕ ಕಾರಣಗಳಿಗಾಗಿ ರಜೆಯನ್ನು ನೀಡಲಾಗುವುದಿಲ್ಲ. ಎಂಬ ಅಂಶವನ್ನು ಸಂಬಂಧಿಸಿದ ನೌಕರರ ಗಮನಕ್ಕೆ ತರಲು ತಿಳಿಸಲಾಗಿದೆ.

**ತರಬೇತಿಗೆ ಆಗಮಿಸುವ ಶಿಕ್ಷಣಾರ್ಥಿಗಳಿಗೆ ಸೂಚನೆಗಳು**

1) ತರಬೇತಿಯು ಕಡ್ಡಾಯವಾಗಿರುತ್ತದೆ ಮತ್ತು ತರಬೇತಿ ಸಮಯದಲ್ಲಿ ಯಾವುದೇ ರಜೆಗಳಿಗೆ ಅನುಮತಿ ಇರುವುದಿಲ್ಲ.
2) ತರಬೇತಿಗೆ ಹಾಜರಾಗುವವರು ತಮ್ಮ ಕೆಲಸದ ಕಾರ್ಯ ಮುಕ್ತ ಪತ್ರ ಹಾಗೂ ಗುರುತಿನ ಪತ್ರವನ್ನು ತಪ್ಪದೇ ತರುವುದು.
3) ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಆವರಣದಲ್ಲಿ/ ವರ್ಗಗಳಲ್ಲಿ ತಂಬಾಕು, ಸಿಗರೇಟ್, ಗುಟ್ಕಾ ಹಾಗೂ ಮದ್ಯಪಾನ ಸೇವನೆಯು ನಿಷೇಧವಾಗಿರುತ್ತದೆ. ಒಂದು ವೇಳೆ ತರಬೇತಿಗೆ ನಿಯೋಜಿಸಲ್ಪಟ್ಟ ಶಿಕ್ಷಣಾರ್ಥಿಗಳು ಅಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ. ನಿಗಮದ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
4) ತರಗತಿಗಳಲ್ಲಿ ಮೊಬೈಲ್ ಪೋನ್ ಬಳಕೆಗೆ ಅವಕಾಶವಿರುವುದಿಲ್ಲ.
5) ತರಬೇತಿಗೆ ಹಾಜರಾಗುವ ಸಮಯದಲ್ಲಿ 2 ಸಂಖ್ಯೆಯ ತಮ್ಮ ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರವನ್ನು ತರುವುದು.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |

ಪ್ರಧಾನ ವ್ಯವಸ್ಥಾಪಕರು 3/5
(ಆ.ಮತ್ತು ಮಾ.ಸಂ.ಅ)
ಗು.ವಿ.ಸ.ಕಂ.ನಿ., ಕಲಬುರಗಿ

ಪ್ರತಿಗಳು :-

1. ಮುಖ್ಯ ಅಭಿಯಂತರರು (ವಿ), (ನಿಗಮ ಯೋಜನೆ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಕಲಬುರಗಿ.
2. ಮುಖ್ಯ ಅಭಿಯಂತರರು (ವಿ),, ಕಾ ಮತ್ತು ಪಾ ವಲಯ ಗು.ವಿ.ಸ.ಕಂ.ನಿ.,/ಕ.ವಿ.ಪ್ರ.ನಿ.ನಿ., ಕಲಬುರಗಿ.
3. ಎಲ್ಲಾ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ ಗು.ವಿ.ಸ.ಕಂ.ನಿ.,
4. ಅಧೀಕ್ಷಕ ಅಭಿಯಂತರರು (ವಿ), ಕ.ವಿ.ಪ್ರ.ನಿ.ನಿ., ಕಲಬುರಗಿ.
5. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವೃತ್ತ ಗು.ವಿ.ಸ.ಕಂ.ನಿ.,
6. ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕಾ ಮತ್ತು ಪಾ/ಸಿ.ಎಸ್.ಸಿ. ವಿಭಾಗಳು ಗು.ವಿ.ಸ.ಕಂ.ನಿ., ಇವರ ಸೂಕ್ತ ಕ್ರಮಕ್ಕಾಗಿ.
7. ಕಾರ್ಯನಿರ್ವಾಹಕ ಅಭಿಯಂತರರು (ವಿ), (ವಾಣಿಜ್ಯ) ನಿಗಮ ಕಛೇರಿ, ಗು.ವಿ.ಸ.ಕಂ.ನಿ., ಕಲಬುರಗಿ ರವರಿಗೆ ಅಂತರ ಜಾಲದಲ್ಲಿ Website ಪ್ರಕಟಣೆಗಾಗಿ.
8. ಕಾರ್ಯನಿರ್ವಾಹಕ ಇಂಜಿನಿಯರ (ವಿ), ಕವಿಪ್ರನಿನಿ., ಕಲಬುರಗಿ /ಯಾದಗಿರ/ಮುನಿರಾಬಾದ /ಲಿಂಗಸೂಗುರು/ಬಳ್ಳಾರಿ ಇವರ ಮಾಹಿತಿಗೆ.

ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ)/ ಮುಖ್ಯ ಆರ್ಥಿಕ ಅಧಿಕಾರಿಗಳು ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು ಮಾಹಿತಿಗೆ.
ಮು.ಕ.